## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ನ್ಯಾಯಾಲಯ, ಕೆ.ಆರ್.ನಗರ

ಸಿಸಿ.ನಂ.286/2019

| | | |
|---|---|---|
| ಸಾಕ್ಷಿಯ ಹೆಸರು | ಎಸ್ ಎಸ್ ಶಂಕರ್ | |
| ತಂದೆಯ ಹೆಸರು | ಲೇಟ್ ಶ್ರೀನಿವಾಸ್ | |
| ವಯಸ್ಸು | 40 ವರ್ಷ | |
| ಉದ್ಯೋಗ | ಪೋಲೀಸ್ ಇಲಾಖೆ | ಡಿ.ಡಬ್ಲ್ಯೂ 1 |
| ವಾಸ ಸ್ಥಳ | ಬನ್ನೂರು | |

ದಿನಾಂಕಃ **06-01-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಆರೋಪಿ ಪರ ವಕೀಲರಿಂದಃ**

1) ದೂರುದಾರರು ನನಗೆ ಪರಿಚಯ ಇರುವುದಿಲ್ಲ. ದೂರುದಾರರು ನನಗೆ ನೀಡಿರುವ ತಿಳುವಳಿಕೆ ಪತ್ರ ನನಗೆ ಇಲಾಖೆ ಮೂಲಕ ತಲುಪಿರುತ್ತದೆ. ನಂತರ ನಾನು ಸದರಿ ತಿಳುವಳಿಕೆ ಪತ್ರಕ್ಕೆ ಪ್ರತ್ಯುತ್ತರ ನೀಡಿರುತ್ತೇನೆ. ನಂತರ 25-05-2019 ರಂದು ನಾನು ದೂರುದಾರರನ್ನು ಬೇಟಿ ಮಾಡಿರುತ್ತೇನೆ. ಆ ಸಮಯದಲ್ಲಿ ದೂರುದಾರರು ಸುಭಾಷ್ ಚಂದ್ರ ಜೈನ್ ಎಂಬುವವರು ನನ್ನ ಮೂಲಕ ದೂರು ದಾಖಲು ಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆ. ಸುಭಾಷ್ ಚಂದ್ರ ಜೈನ್ ಮತ್ತು ಮಂಜೇಗೌಡ ನನ್ನ ವಿರುದ್ಧ ಪ್ರಕರಣ ದಾಖಲು ಮಾಡಿರುತ್ತಾರೆ. ಸದರಿ ಪ್ರಕರಣ ವಜಾ ಆಗಿರುತ್ತದೆ.

2) ದೂರುದಾರರನ್ನು ಬೇಟಿ ಆದಾಗ ನನ್ನ ಮತ್ತು ಅವರ ನಡುವೆ ಒಂದು ಒಪ್ಪಿಗೆ ಪತ್ರ ಆಗಿರುತ್ತದೆ. ಸದರಿ ಪತ್ರವನ್ನು ಹಾಜರುಪಡಿಸಿದ್ದು ಸದರಿ ಪತ್ರವನ್ನು ನಿಡಿ 1 ಎಂದು ಗುರುತಿಸಲಾಯಿತು. ಸದರಿ ಪತ್ರದಲ್ಲಿ ದೂರುದಾರರ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಸಹಿಯನ್ನು ನಿಡಿ 1(ಎ) ಎಂದು ಗುರುತಿಸಲಾಯಿತು. ನನ್ನ ಇಲಾಖೆಯವರು ನೀಡಿರುವ ಹಾಜರಾತಿ ದೃಡೀಕೃರಣ ಪತ್ರವನ್ನು ಹಾಜರುಪಡಿಸಿರುತ್ತೇನೆ. ಸದರಿ ದಾಖಲೆಯನ್ನು ನಿಡಿ 2 ಎಂದು ಗುರುತಿಸಲಾಯಿತು. ನಂತರ ನಾನು ಹಲವಾರು ಬಾರಿ ದೂರುದಾರರನ್ನು ಬೇಟಿ

ಮಾಡಿ ಚೆಕ್ಕು ವಾಪಸ್ಸು ಕೇಳಿರುತ್ತೇನೆ ಆದರೆ ನೀಡಿರುವುದಿಲ್ಲ. ಆದ್ದರಿಂದ ನನ್ನನ್ನು ಈ ಪ್ರಕರಣದಿಂದ ಬಿಡುಗಡೆ ಮಾಡಬೇಕೆಂದು ಕೋರುತ್ತೇನೆ.

**ಪಾಟೀ ಸವಾಲುಃ** ಪಿರ್ಯಾದುದಾರರ ಪರ ವಕೀಲರು ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
**ಮತ್ತು ಪ್ರದನ್ಯಾದಂ., ಕೆ.ಆರ್.ನಗರ.**